**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಪಿ. ಸುಜಾ ಕುಶಾಲಪ್ಪ, ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಕೊಡಗು ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಅಂಶಕ್ಕೆ ಉತ್ತರಿಸುವ ಬಗ್ಗೆ.**

47

**ವಿಷಯ:-**

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯ ಮುದದೇನೂರು ಕಾವಲು ಗ್ರಾಮದ ಸರ್ವೇ ನಂ.01 ರ 6.31 ಹೆಕ್ಟೇರ್ ಪರಿಭಾವಿತ ಅರಣ್ಯ ಪ್ರದೇಶದಲ್ಲಿ ಕಲ್ಲು ಗಣಿ ಗುತ್ತಿಗೆ ಕ್ರಷರ್ ಲೈಸೆನ್ಸ್ ಮಂಜೂರಾತಿಗಾಗಿ ಅರಣ್ಯ ತೀರುವಳಿಗಾಗಿ ಸದರಿ ಅರಣ್ಯ ಪ್ರದೇಶದ ಬದಲಾಗಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ತಾವರಗೇರಾ ಹೋಬಳಿಯ ಮ್ಯಾದರಡೊಕ್ಕಿ ಗ್ರಾಮದ ಸರ್ವೇ ನಂ 90 ರ ವಿಸ್ತೀರ್ಣ 15.24 ಎಕರೆ ಪ್ರದೇಶವನ್ನು ಗುರುತಿಸಿದ್ದು, ಸ್ಥಾನಿಕ ಪರಿಶೀಲನೆ ಮಾಡಿ ನೋಡಿ ಇಂತಹ ಪರಿಹಾರಾತ್ಮಕ ನೆಡುತೋಪು ಬೆಳೆಸುವುದರಿಂದ ಅರಣ್ಯ ಪ್ರದೇಶ ಹೆಚ್ಚಿಸಬಹುದಾಗಿರುತ್ತದೆ. ಅಲ್ಲದೆ ಸದರಿ ಪ್ರದೇಶವು ವನ್ಯಪ್ರಾಣಿಗಳಿಗೆ ಅನುಕೂಲಕರ ಸ್ಥಳವಾಗಿರುತ್ತದೆ ಹಾಗೂ ಶೇ 80 ರಷ್ಟು ಸ್ಥಳದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಯೋಗ್ಯವಾಗಿರುತ್ತದೆ, ಹಾಗೂ ಇಲಾಖೆಗೆ ಕನಿಷ್ಟ 25 ಹೆಕ್ಟೇರ್ ಭೂಮಿ ಒಂದೇ ಕಡೆ ಪರಿಹಾರಾತ್ಮಕ ನೆಡುತೋಪಿಗಾಗಿ ಸದರಿ ಜಮೀನು ನೀಡಿದ್ದಲ್ಲಿ ಮ್ಯಾದರಡೊಕ್ಕಿ ಪರಿಭಾವಿತ ಅರಣ್ಯ ಪ್ರದೇಶದಿಂದ ದೂರವಿರುವ ಈ ಪ್ರದೇಶವನ್ನು ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ ಎಂಬ ವರದಿಯನ್ನು ನೀಡಲಾಗಿದೆ. ಆದುದರಿಂದ, ಪರಿಹಾರಾತ್ಮಕ ಭೂಮಿಯನ್ನು ನೀಡಿರುವುದರಿಂದ ಸದರಿ ಪ್ರದೇಶದಲ್ಲಿ ಗಣಿಗಾರಿಕೆ ಮಾಡಲು ನಿರಾಕ್ಷೇಪಣಾ ಪತ್ರವನ್ನು ಅರಣ್ಯ ಇಲಾಖೆಯವರು ನೀಡಬೇಕಿದ್ದು, ಈ ಸಂಬಂಧ ಸೂಕ್ತ ಕ್ರಮ ವಹಿಸುವ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವ ಕುರಿತು.

****

**ಉತ್ತರ:-**

ಸರ್ಕಾರದ ಆದೇಶ ಸಂಖ್ಯೆ: ಅಪಜಿ 185 ಎಫ್‌ಎಎಸ್ 2011 ದಿನಾಂಕ: 05.05.2022 ರಂತೆ ಮಲ್ಲಿಪಟ್ಟಣ ಹೋಬಳಿ ಮುದುಗನೂರು ಕಾವಲು ಗ್ರಾಮದ ಸರ್ವೇ ನಂ 01 ರಲ್ಲಿ 64.07 ಹೆಕ್ಟೇರ್ ಪ್ರದೇಶವನ್ನು (ಸಂಪೂರ್ಣ ವಿಸ್ತೀರ್ಣ) ಪರಿಭಾವಿತ ಅರಣ್ಯ ಪ್ರದೇಶವೆಂದು ಉದ್ಘೋಷಣೆ ಹೊರಡಿಸಿದ್ದು, ದಿನಾಂಕ: 27.07.2016 ಮತ್ತು 07.12.2018 ರಲ್ಲಿ ಪರಿಭಾವಿತ ಅರಣ್ಯ ಪ್ರದೇಶವೆಂದು ಘೋಷಣೆಯಾಗುವುದಕ್ಕೂ ಮುಂಚಿತವಾಗಿ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿರುತ್ತದೆ.

ಅರ್ಜಿದಾರರು ಮಾನ್ಯ ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 7783/2024ನ್ನು ದಾಖಲಿಸಿದ್ದು, ಘನ ಉಚ್ಚ ನ್ಯಾಯಾಲಯ ಬೆಂಗಳೂರು ರವರು ಸರ್ಕಾರದ ಆದೇಶ ದಿನಾಂಕ: 05.05.2022ರಲ್ಲಿ ಘೋಷಣೆಯಾಗಿರುವಂತೆ ಪರಿಭಾವಿತ (ಡೀಮ್ಡ್) ಅರಣ್ಯವನ್ನು ಸ್ವೀಕರಿಸಿ 02.04.2024ರಲ್ಲಿ ಆದೇಶಿಸಿರುತ್ತಾರೆ.

ಸದರಿ ಮಲ್ಲಿಪಟ್ಟಣ ಹೋಬಳಿ ಮುದುಗನೂರು ಕಾವಲು ಗ್ರಾಮದ ಸರ್ವೇ ನಂ 01 ರ ಪ್ರದೇಶವು ಸರ್ಕಾರದ ಆದೇಶದಂತೆ, ಪರಿಭಾವಿತ ಅರಣ್ಯ ಪ್ರದೇಶವಾಗಿರುವುದರಿಂದ ದಿನಾಂಕ: 22.08.2024ರಂದು ಈ ಹಿಂದೆ ನೀಡಲಾಗಿರುವ ನಿರಾಕ್ಷೇಪಣಾ ಪತ್ರವನ್ನು ಹಿಂಪಡೆಯಲಾಗಿರುತ್ತದೆ.

ಪ್ರಸ್ತುತ ಅರಣ್ಯ ಇಲಾಖೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರ ಜಂಟಿ ವರದಿಯಂತೆ ಸದರಿ ಪ್ರದೇಶದಲ್ಲಿ ಕಲ್ಲುಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದ್ದು, ಉಪಯೋಗಿ ಸಂಸ್ಥೆಯವರು ಪರಿವೇಶ್ ತಂತ್ರಾಂಶದಲ್ಲಿ ಅರಣ್ಯ ತೀರುವಳಿಗಾಗಿ ಅರ್ಜಿಸಲ್ಲಿಸಿದ್ದು, ಅರ್ಜಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

**ಕಡತ ಸಂಖ್ಯೆ: ಎಫ್‌ಇಇ 18 ಎಫ್‌ಎಫ್‌ಎಂ 2025**

**(ಈಶ್ವರ ಬಿ ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು